2016 ಕ.ತೀ.ವ 424

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

**ಶ್ರೀಮತಿ ಜಿ. ಪ್ರೇಮಲತಾ @ ಎನ್. ಪ್ರೇಮಲತಾ –ವಿರುದ್ಧ– ಶ್ರೀ ಆರ್. ನಾಗೇಶ್***

**ಕೌಟುಂಬಿಕ ನ್ಯಾಯಾಲಯಗಳ ಕಾಯಿದೆ ಕಲಂ 19(1)ರಡಿಯಲ್ಲಿ ನಿಯತ ಮೊದಲನೇ ಮೇಲ್ಮನವಿ.**

**ಪತಿಯಿಂದ ವಿವಾಹ ವಿಚ್ಛೇದನ ಕೋರಿ 1955ರ ಹಿಂದೂ ವೈವಾಹಿಕ ಕಾಯಿದೆ ಕಲಂ 13(1)(1ಎ) ಮತ್ತು (1ಬಿ) ರಡಿಯಲ್ಲಿ ಪತ್ನಿಯು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.**

**ಎಲ್ಲ ಮಾನವ ಜೀವಿಗಳಿಗೆ ಸೂಕ್ತವಾದ ರೀತಿಯಲ್ಲಿ ಬಾಳುವ ಅರ್ಹತೆಯಿರುತ್ತದೆ. ಈ ಕಾರಣದಿಂದ ಅಧಿವಿಚಾರಣಾ ನ್ಯಾಯಾಲಯವು ವಿವಾಹ ವಿಚ್ಛೇದಿಸಿದನ್ನು ನಿರಾಕರಿಸುವ ಕ್ರಮ ತುಂಬಾ ಕಠಿಣವಾಗಿದ್ದು ಅದು ನೀಡಿದ ಕಾರಣಗಳು ನ್ಯಾಯ ಸಮ್ಮತವಲ್ಲವೆಂದು ಅಭಿಪ್ರಾಯಪಟ್ಟು ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ಪುರಸ್ಕರಿಸಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆ*** | ***ಪ್ಯಾರಾದಲ್ಲಿ*** |
|---|---|
| *1. ಐಎಲ್ಆರ್ 2009 ಕೆಎಆರ್ 4193 ಹುಕ್ಕವ್ವ –ವಿರುದ್ಧ– ವಿಶ್ವನಾಥ್* | *(ಉಲ್ಲೇ) 13* |

ಅರ್ಜಿದಾರರ ಪರ : ಶ್ರೀ ಪ್ರಭುಗೌಡ ಬಿ. ತುಂಬಿಗಿ, ವಕೀಲರು;
ಪ್ರತ್ಯರ್ಜಿದಾರರಿಗೆ ಜಾರಿ ಮಾಡಿದೆ.

*ಎಂ.ಎಫ್.ಎ. ಸಂಖ್ಯೆ: 2291/2013 (ಎಫ್‌ಸಿ), ದಿನಾಂಕ: 11ನೇ ಸೆಪ್ಟೆಂಬರ್, 2015.

## ತೀರ್ಪು

**ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್:**

ಮಾನ್ಯ ಪ್ರಧಾನ ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಲಯ, ಬೆಂಗಳೂರು, ಇವರ 15.1.2013ರಂದಿನ ತೀರ್ಪು ಮತ್ತು ಡಿಕ್ರಿಯ ಮೇರೆಗೆ ವಜಾಗೊಂಡಿದ್ದ ಹಿಂದೂ ವಿವಾಹ ಅಧಿನಿಯಮ, 1955 (ಇನ್ನು ಮುಂದೆ ಸಂಕ್ಷಿಪ್ತವಾಗಿ ಅಧಿನಿಯಮ ಎಂದು ಬಳಸಲಾಗಿರುತ್ತದೆ) ರ 13(1) (iಎ) ಮತ್ತು (iಬಿ) ಪ್ರಕರಣದಡಿಯಲ್ಲಿ ಸಲ್ಲಿಸಿದ್ದ ವಿವಾಹದ ವಿಚ್ಛೇದನ ಮತ್ತು ವಿಘಟನೆಯ ಡಿಕ್ರಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ್ದ ವಿಫಲಳಾದ ಪತ್ನಿಯು ಈ ಅಪೀಲನ್ನು ಸಲ್ಲಿಸಿರುತ್ತಾಳೆ.

2. ಅರ್ಜಿದಾರರು, ಇತರೆ ವಿಷಯಗಳನ್ನು ವಾದಿಸಿ ಕೌಟುಂಬಿಕ ನ್ಯಾಯಾಲಯದ ಎದುರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ:

(i) ಆಕೆಯ ವಿವಾಹವು, ಆಕೆಯ ಸ್ನೇಹಿತರು ಮತ್ತು ಹಿತೈಷಿಗಳ ಉಪಸ್ಥಿತಿಯಲ್ಲಿ ಹಿಂದೂ ಆಚರಣೆಗಳು ಮತ್ತು ಸಂಪ್ರದಾಯದ ಪ್ರಕಾರ ಸೋಮೇಶ್ವರ ದೇವಾಲಯ, ಅಲಸೂರು, ಬೆಂಗಳೂರು ಇಲ್ಲಿ 10.3.2004ರಂದು ಪ್ರತ್ಯರ್ಜಿದಾರರೊಂದಿಗೆ ವಿಧಿವತ್ತಾಗಿ ನಡೆದಿರುತ್ತದೆ;

(ii) ದಂಪತಿಯು 12.10.2006ರಂದು ಜನಿಸಿರುವ ಕಾರುಣ್ಯ ಎನ್. ಎಂಬ ಹೆಸರಿನ ಒಂದು ಹೆಣ್ಣು ಮಗುವನ್ನು ಹೊಂದಿರುತ್ತಾರೆ;

(iii) ವಿವಾಹವಾದ ಕೆಲವು ತಿಂಗಳುಗಳ ತರುವಾಯ, ಅಪೀಲುದಾರ ಜೊತೆ ಪ್ರತ್ಯರ್ಜಿದಾರರ ವರ್ತನೆಯು ಬದಲಾಗಲು ಆರಂಭವಾಗಿರುತ್ತದೆ ಹಾಗೂ ಈತ

ವರದಕ್ಷಿಣೆಯನ್ನು ಕೇಳಲು ಆರಂಭಿಸಿರುತ್ತಾನೆ ಮತ್ತು ಅಪೀಲುದಾರರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ನೀಡಲು ಆರಂಭಿಸಿರುತ್ತಾನೆ;

(iv) ದಿನಕಳೆದಂತೆ, ಅಪೀಲುದಾರರ ನಡವಳಿಕೆಯುನ್ನು ಪ್ರತ್ಯರ್ಜಿದಾರರು ಅನುಮಾನಿಸುವುದರೊಂದಿಗೆ ಪರಿಸ್ಥಿತಿಯು ತೀರ ವಿಕೋಪಕ್ಕೆ ತಿರುಗಿರುತ್ತದೆ;

(v) 10.2.2006ರಂದು 12 ತಿಂಗಳೊಳಗೆ ಹಿಂತಿರುಗಿಸುತ್ತೇನೆಂದು ಹೇಳಿ ಅಪೀಲುದಾರರ ತಾಯಿಯಿಂದ 1,00,000/– ರೂ.ಗಳ ಮೊಬಲಗನ್ನು ಪ್ರತ್ಯರ್ಜಿದಾರರು ಪಡೆದಿದ್ದು, ಈ ವರೆಗೂ ಅದನ್ನು ಹಿಂದಿರುಗಿಸಿರುವುದಿಲ್ಲ;

(vi) ನವೆಂಬರ್ 2009ರಲ್ಲಿ, ಪ್ರತ್ಯರ್ಜಿದಾರರು, ಮದುವೆ ಮಾಡಿಕೊಂಡು ಬಂದ ಮನೆಯಿಂದ ಅಪೀಲುದಾರರನ್ನು ಆಚೆ ಹಾಕಿರುತ್ತಾರೆ.

(vii) ಅಪೀಲುದಾರರು ತನ್ನ ಮತ್ತು ತನ್ನ ಪತಿಯ ನಡುವಿನ ವಿಷಯುವನ್ನು ಉಪಶಮನ ಮಾಡಲು ಹಲವಾರು ಪ್ರಯತ್ನಗಳನ್ನು ಮಾಡಿದ್ದಾಗ್ಯೂ, ಅದು ಯಾವುದೇ ಫಲವನ್ನು ನೀಡಿರುವುದಿಲ್ಲ. ಆದ್ದರಿಂದ, ಆಕೆ ವಿಚ್ಛೇದನದ ಡಿಕ್ರಿಯನ್ನು ಕೋರಿ ಅದಕ್ಕಾಗಿ ಒತ್ತಾಯಿಸಿರುತ್ತಾಳೆ.

3. ಅಧಿವಿಚಾರಣಾ ನ್ಯಾಯಾಲಯದ ಆದೇಶ ಪ್ರತಿಯಲ್ಲಿ 9.10.2012ನೇ ದಿನಾಂಕದ ಆದೇಶದ ಮೂಲಕ ಪ್ರತ್ಯರ್ಜಿದಾರನನ್ನು ಏಕ–ಪಕ್ಷೀಯವಾಗಿ ಪರಿಗಣಿಸಿರುವುದು ಕಂಡು ಬರುತ್ತದೆ. ಅಪೀಲುದಾರರು ತನ್ನ ವಾದವನ್ನು

ರುಜುವಾತುಪಡಿಸಿಕೊಳ್ಳಲು ತನ್ನನ್ನು ಪಿ.ಡಬ್ಲ್ಯು.2 ಎಂದು ಪರೀಕ್ಷಿಸಿಕೊಂಡು ಹಾಗೂ ಪಿ.1 ರಿಂದ ಪಿ.9ರ ವರೆಗಿನ ನಿಶಾನೆಗಳನ್ನು ಹಾಜರುಪಡಿಸಿರುತ್ತಾರೆ. ದಾಖಲೆ ಮೇಲಿನ ಅಪೀಲುದಾರರ ವಾದಗಳು ಮತ್ತು ಸಾಕ್ಷ್ಯವನ್ನು ಪರಿಗಣಿಸಿದ ಮೇಲೆ, ಕೌಟುಂಬಿಕ ನ್ಯಾಯಾಲಯವು ಈ ಮುಂದಿನ ಅಂಶಗಳನ್ನು ಪರಿಗಣನೆಗಾಗಿ ರೂಪಿಸಿರುತ್ತದೆ.

1. ಅರ್ಜಿದಾರರು, ವಿವಾಹದ ತರುವಾಯ ಮನೆಯಲ್ಲಿ ಪ್ರತ್ಯರ್ಜಿದಾರರು ತಮ್ಮನ್ನು ತುಂಬಾ ಕ್ರೂರವಾಗಿ ಮತ್ತು ನಿಕೃಷ್ಟವಾಗಿ ನಡೆಸಿಕೊಂಡಿರುತ್ತಾರೆಂಬುದನ್ನು ರುಜುವಾತುಪಡಿಸಿರುತ್ತಾರೆಯೇ?

2. ಮುಂದುವರೆದು, ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿರುವ ನಿಕಟ ಪೂರ್ವದ ಎರಡು ವರ್ಷಗಳಿಂದಲೂ ಪ್ರತ್ಯರ್ಜಿದಾರನು ತನ್ನನ್ನು ತೊರೆದಿರುತ್ತಾನೆಂಬುದನ್ನೂ ರುಜುವಾತು ಪಡಿಸಿರುತ್ತಾರೆಯೇ?

3. ಹಿಂದೂ ವಿವಾಹ ಅಧಿನಿಯಮದ 13ನೇ ಪ್ರಕರಣದ (1) (iಎ) ಮತ್ತು (iಬಿ) ಉಪ ಪ್ರಕರಣಗಳಡಿಯಲ್ಲಿ ವಿಚ್ಛೇದನದ ಡಿಕ್ರಿಗೆ ಅರ್ಜಿದಾರರು ಅರ್ಹರಾಗಿರುತ್ತಾರೆಯೇ?

4. ಕೌಟುಂಬಿಕ ನ್ಯಾಯಾಲಯವು ಈ ಎಲ್ಲಾ ಅಂಶಗಳಿಗೂ ನಕಾರಾತ್ಮಕವಾಗಿ ಉತ್ತರಿಸಿ, ಅರ್ಜಿಯನ್ನು ವಜಾಗೊಳಿಸಿರುತ್ತಾರೆ. ಹಾಗಾಗಿ ಈ ಅಪೀಲನ್ನು ಸಲ್ಲಿಸಲಾಗಿದೆ.

5. ಅಪೀಲುದಾರರ ಪರ ಮಾನ್ಯ ವಕೀಲರಾದ ಶ್ರೀ ಪ್ರಭುಗೌಡ ಬಿ. ತುಂಬಿಗಿ ಅವರ ವಾದವನ್ನು ಆಲಿಸಿರುತ್ತೇವೆ ಮತ್ತು ಅಧಿವಿಚಾರಣಾ ನ್ಯಾಯಾಲಯದ ದಾಖಲೆಗಳನ್ನು ಒಳಗೊಂಡಂತೆ ಮುಖ್ಯವಾದ ಕಾಗದಪತ್ರಗಳನ್ನು ಪರಿಶೀಲಿಸಲಾಗಿದೆ.

6. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಪ್ರತ್ಯರ್ಜಿದಾರನು ನೋಟೀಸನ್ನು ಸ್ವೀಕರಿಸಲು ಮತ್ತು ವ್ಯವಹರಣೆಗಳಲ್ಲಿ ಪಾಲ್ಗೊಳ್ಳಲು ಒಪ್ಪಿಕೊಂಡಿರುವುದಿಲ್ಲವೆಂದು ಬಲವಾಗಿ ವಾದಿಸಿರುತ್ತಾರೆ. ಅಪೀಲುದಾರರು ಇಬ್ಬರು ಸಾಕ್ಷಿದಾರರನ್ನು ವಿಚಾರಣೆ ಮಾಡಿ, ಪ್ರತ್ಯರ್ಜಿದಾರರು, ಆಕೆಗೆ ಹಿಂಸೆ ನೀಡಿರುವುದರ ಜೊತೆಗೆ ಆಕೆಯ ತಾಯಿಯಿಂದ ಹಣ ಪಡೆದು, ಅದನ್ನು ಹಿಂತಿರುಗಿಸಿರುವುದಿಲ್ಲವೆಂದು ಸಾಬೀತು ಪಡಿಸಲು ನಿಶಾನೆ.ಪಿ 9 ನ್ನೂ ಸೇರಿದಂತೆ 9 ದಸ್ತಾವೇಜುಗಳನ್ನು ಹಾಜರುಪಡಿಸಿರುತ್ತಾರೆ. ದಾಖಲೆಯುಲ್ಲಿ ಒದಗಿಸಲಾದ ಈ ಸಾಕ್ಷ್ಯವು ವಿವಾದಾತೀತವಾಗಿರುತ್ತದೆ. ಈ ಸಂದರ್ಭಗಳ ಹಿನ್ನೆಲೆಯಲ್ಲಿ, ಮಾನ್ಯ ಕೌಟುಂಬಿಕ ನ್ಯಾಯಾಲಯವು ಅರ್ಜಿಯನ್ನು ವಜಾ ಮಾಡಿರುವುದು ಸಮರ್ಥನೀಯವಾಗಿರುವುದಿಲ್ಲ. ತದನುಸಾರವಾಗಿ ಅವರು ಈ ಅಪೀಲನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

7. ನಾವು, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳ ನಿವೇದನೆಗಳಿಗೆ ನಮ್ಮ ಕಾಳಜಿಯುತ ಪರಿಗಣನೆಯನ್ನು ನೀಡಿ, ವಾದಗಳು ಮತ್ತು ಸಾಕ್ಷ್ಯವನ್ನು ಪರಿಶೀಲಿಸಿರುತ್ತೇವೆ.

8. ಅಪೀಲುದಾರರು ಪಿ.ಡಬ್ಲ್ಯು.1 ಆಗಿ, ಪ್ರತ್ಯರ್ಜಿದಾರರು ತನಗೆ ದೈಹಿಕವಾಗಿ ಚಿತ್ರಹಿಂಸೆ ನೀಡಿ, ಸಾಕಷ್ಟು ಕಿರುಕುಳವನ್ನು ನೀಡಿರುತ್ತಾರೆಂದು ಹೇಳಿರುತ್ತಾಳೆ. ಅಲ್ಲದೆ, ಸಂಶಯಕ್ಕೆ ಎಡೆಕೊಡದಂತೆ, ಪ್ರತ್ಯರ್ಜಿದಾರ ತನ್ನ ನಡತೆಯ ಬಗ್ಗೆ ಪ್ರಶ್ನಿಸುತ್ತಿದ್ದನ್ನು ಸಹ ಹೇಳಿರುತ್ತಾರೆ. ಇದನ್ನು ಖಚಿತಪಡಿಸಲು ಆಕೆ ತನ್ನ ಸಾಕ್ಷ್ಯದಲ್ಲಿ ಈ ರೀತಿ ಹೇಳಿರುತ್ತಾಳೆ:

> *"7. ಪ್ರತ್ಯರ್ಜಿದಾರನು, ಕ್ಷುಲ್ಲಕ ಕಾರಣಗಳಿಗಾಗಿ ಜಗಳ ತೆಗೆಯುತ್ತಿದ್ದನು ಮತ್ತು ನನ್ನ ನಡತೆಯ ಬಗ್ಗೆ ಶಂಕಿಸುತ್ತಿದ್ದನು. ಪ್ರತ್ಯರ್ಜಿದಾರನು ತನ್ನ ಜೊತೆ ಜಗಳ ತೆಗೆದು ಬಹಳಷ್ಟು ಸಾರಿ ನನ್ನ ದಾಂಪತ್ಯ ನಿಷ್ಠೆ ಮತ್ತು ನಡತೆಯ ಬಗ್ಗೆ ಅನುಮಾನವನ್ನು ಇಟ್ಟುಕೊಂಡೆ ಬೈಯುತ್ತಿದ್ದನು. ನಾನು ಅಚ್ಚುಕಟ್ಟಾಗಿ ಅಲಂಕಾರ*

*ಮಾಡಿಕೊಂಡಾಗಲೆಲ್ಲಾ, ನನಗೆ ಬೇರೆಯವರೊಂದಿಗೆ ಸಂಬಂಧ ಕಟ್ಟಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದನು. ಸಭ್ಯತೆಯ ಎಲ್ಲಾ ಎಲ್ಲೆಯನ್ನು ಮೀರಿ, ಪ್ರತ್ಯರ್ಜಿದಾರನು ಹಲವಾರು ಭಾರಿ ನೇರವಾಗಿ ನನ್ನನ್ನು ನಿನ್ನ ಮಿಂಡ ಯಾರು? ಎಂದು ಕೇಳುತ್ತಿದ್ದನು".*
(ಆವರಣ ಚಿಹ್ನೆಯಲ್ಲಿರುವ ಪದಗಳು ನಮ್ಮಿಂದ ಬರೆಯಲ್ಪಟ್ಟಿವೆ).

9. ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿರುವುದರ ಜೊತೆಗೆ, ಪ್ರತ್ಯರ್ಜಿದಾರರು, ಅಪೀಲುದಾರರ ತಾಯಿಯಿಂದ 1,00,000/– ರೂ.ಗಳನ್ನು ಪಡೆದಿದ್ದು, 12 ತಿಂಗಳುಗಳೊಳಗೆ ಸದರಿ ಮೊಬಲಗನ್ನು ಹಿಂದಿರುಗಿಸಲು ಒಪ್ಪಿಕೊಂಡು ನಿಶಾನೆ.ಪಿ 9ನ್ನು (ಒಪ್ಪಂದಪತ್ರ) ಮಾಡಿಕೊಂಡಿರುತ್ತಾರೆ. ಅಪೀಲುದಾರರು ಸದರಿ ಮೊಬಲಗನ್ನು ಮರು ಸಂದಾಯ ಮಾಡಿರುವುದಿಲ್ಲವೆಂದು ಒತ್ತಿ ಹೇಳಿರುತ್ತಾರೆ. ಬೇರ್ಪಟ್ಟಿರುವುದಕ್ಕೆ ಸಂಬಂಧಿಸಿದಂತೆ, ನವೆಂಬರ್ 2009ರಲ್ಲಿ ಮನೆಯಿಂದ ತನ್ನನ್ನು ಆಚೆ ಹಾಕಿರುತ್ತಾರೆಂದು ಅಪೀಲುದಾರರು ಹೇಳಿರುತ್ತಾರೆ.

10. ಅಪೀಲುದಾರರ ತಾಯಿಯನ್ನು ಪಿ.ಡಬ್ಲ್ಯು.2 ಎಂದು ವಿಚಾರಣೆ ಮಾಡಲಾಗಿರುತ್ತದೆ ಮತ್ತು ಈಕೆಯು ತನ್ನ ಮಗಳು ನೀಡಿರುವಂತೆಯೇ ಕೌಟುಂಬಿಕ ನ್ಯಾಯಾಲಯದ ಎದುರು ಸಾಕ್ಷ್ಯ ನೀಡಿರುತ್ತಾರೆ.

11. ದಾಖಲೆ ಮೇಲಿನ ದೃಢೋಕ್ತಿಗಳು ಮತ್ತು ಸಾಕ್ಷ್ಯವು ಪ್ರಶ್ನಿಸಲು ಸಾಧ್ಯವಾಗದಂತೆ ಉಳಿದಿರುತ್ತವೆ. ಪ್ರತ್ಯರ್ಜಿದಾರರನ್ನು, ಕೌಟುಂಬಿಕ ನ್ಯಾಯಾಲಯದ ಎದುರು ವ್ಯವಹರಣೆಗಳಲ್ಲಿ ಏಕಪಕ್ಷೀಯ ಮಾಡಲಾಗಿದೆ. ಈ ನ್ಯಾಯಾಲಯದ 4.9.2015ನೇ ದಿನಾಂಕದ ಕಚೇರಿ ಟಿಪ್ಪಣಿಯು, ಪ್ರತ್ಯರ್ಜಿದಾರನಿಗೆ ರವಾನಿಸಲಾಗಿದೆಯೆಂಬುದನ್ನು ಸ್ಪಷ್ಟಪಡಿಸಿರುತ್ತದೆ. ಆತನ ಹೆಸರನ್ನು ವ್ಯಾಜ್ಯ ಪಟ್ಟಿಯಲ್ಲಿ ತೋರಿಸಲಾಗಿರುತ್ತದೆ. ಈತ ಖುದ್ದಾಗಿಯಾಗಲೀ ಇಲ್ಲವೇ ವಕೀಲರ ಮೂಲಕವಾಗಿಯಾಗಲೀ ಹಾಜರಾಗಿರುವುದಿಲ್ಲ.

12. ಕೌಟುಂಬಿಕ ನ್ಯಾಯಾಲಯವು, ಕ್ರೌರ್ಯದ ನಿರ್ದಿಷ್ಟ ಘಟನೆಗಳನ್ನು ಅಪೀಲುದಾರರು ವಾದಿಸಿರುವುದಿಲ್ಲವೆಂದು ಅಭಿಪ್ರಾಯ ಪಟ್ಟಿರುತ್ತದೆ. ಕೌಟುಂಬಿಕ ನ್ಯಾಯಾಲಯವು, ಅಪೀಲುದಾರರು ಮತ್ತು ಆಕೆಯ ತಾಯಿ (ಪಿ.ಡಬ್ಲ್ಯೂ.2)ಯ ಸಾಕ್ಷಿಗಳನ್ನು ಪ್ರಶ್ನಿಸಲಾಗಿರುವುದಿಲ್ಲ ಮತ್ತು ಅವುಗಳಿಗೆ ಸಂಬಂಧಿಸಿದಂತೆ ಯಾವುದೇ ವಿವಾದವಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುವುದನ್ನು ಇಲ್ಲಿ ದಾಖಲಿಸಿಕೊಳ್ಳುವುದು ಯೋಗ್ಯವಾದುದಾಗಿರುತ್ತದೆ. ಪ್ರಸ್ತುತ ಮಾನ್ಯ ಕೌಟುಂಬಿಕ ನ್ಯಾಯಾಲಯದ ಅಭಿಪ್ರಾಯದಲ್ಲಿ, ದಾಖಲೆ ಮೇಲಿನ ಸಾಕ್ಷ್ಯವು, ಅಪೀಲುದಾರರು ಮಾಡಿದ ಕೋರಿಕೆಯನ್ನು ಈಡೇರಿಸಲು ಪ್ರಭಾವಿಸುವುದಿಲ್ಲವೆಂದಾಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಮಾನ್ಯ ಕೌಟುಂಬಿಕ ನ್ಯಾಯಾಲಯವು, ವಾಸ್ತವವಾಗಿ ಅಪೀಲುದಾರರು ಪ್ರತ್ಯರ್ಜಿದಾರರ ಕ್ರೌರ್ಯಕ್ಕೆ ಬಲಿಪಶುವಾಗಿದ್ದಾರೆ ಮತ್ತು ಪ್ರತ್ಯರ್ಜಿದಾರರು ತಮ್ಮ ವೈವಾಹಿಕ ಜೀವನಕ್ಕೆ ಇತಿಶ್ರೀ ಹಾಡುವ ಉದ್ದೇಶದೊಂದಿಗೆ ಅಪೀಲುದಾರರನ್ನು ಪರಿತ್ಯಜಿಸಿರುತಾರೆಂಬ ಅಭಿಪ್ರಾಯಕ್ಕೆ ಬರಲು ಸಾಕಾಗುವಷ್ಟು ಸಾಕ್ಷ್ಯಗಳನ್ನು ಕಂಡುಕೊಂಡಿರುವುದಿಲ್ಲವೆಂಬುದಾಗಿದೆ.

13. ಪ್ರತ್ಯರ್ಜಿದಾರ ಪತಿಗೆ ಕೌಟುಂಬಿಕ ನ್ಯಾಯಾಲಯ ಮತ್ತು ಈ ನ್ಯಾಯಾಲಯಗಳೆರಡೂ ಕಾನೂನಿಗನುಸಾರವಾಗಿ, ಸಮನುಗಳನ್ನು ಜಾರಿ ಮಾಡಿರುತ್ತವೆ. ಆದರೆ, ಈತ ವ್ಯವಹರಣೆಗಳಲ್ಲಿ ಭಾಗಿಯಾಗದಿರಲು ನಿರ್ಧರಿಸಿರುತ್ತಾನೆ. ವ್ಯವಹರಣೆಗಳ ಕಾನೂನು ತನ್ನದೆ ಆದ ಪಾವಿತ್ರ್ಯತೆಯನ್ನು ಹೊಂದಿರುತ್ತದೆ. ಹಾಜರಾಗುವಂತೆ ನ್ಯಾಯಾಲಯ ಆಜ್ಞಾಪಿಸಿದಾಗ, ಅದಕ್ಕೆ ಪ್ರತಿಕ್ರಿಯೆಯಾಗಿ ನ್ಯಾಯಾಲಯದ ವ್ಯವಹರಣೆಗಳಿಗೆ ಗೈರು ಹಾಜರಾಗುವ ಅಥವಾ ವಿಮುಖವಾಗುವ ಆಯ್ಕೆಯನ್ನು ಮಾಡಿಕೊಳ್ಳುವ ಪಕ್ಷಕಾರ – ಪ್ರತ್ಯರ್ಜಿದಾರರ ಉದ್ಧಟ ವರ್ತನೆಯನ್ನು ವ್ಯವಹರಣೆಯ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ವ್ಯವಹರಿಸಬೇಕಾಗಿರುತ್ತದೆ. ಆದ್ದರಿಂದ, ಈ ಪ್ರಕರಣದಲ್ಲಿನ ದಾಖಲೆಗಳು ಪ್ರತ್ಯರ್ಜಿದಾರನ ವಿರುದ್ಧ ಏಕ–ಪಕ್ಷೀಯವಾಗಿ ಮುಂದುವರೆಯಲು ಸಾಕಷ್ಟು ಅವಕಾಶಗಳನ್ನು ಒದಗಿಸುತ್ತವೆ ಎಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಈ ನ್ಯಾಯಾಲಯದ ವಿಭಾಗೀಯ ಪೀಠವು, ವೈವಾಹಿಕ ಸಂಬಂಧವಿದ್ದು ಪ್ರತ್ಯೇಕವಾಗಿ, ನಿರಂತರವಾಗಿ ಬದುಕುತ್ತಿದ್ದಾರೆ ಎಂಬುದೇ ಮನಸ್ಸಿನ ಕ್ಷೋಭೆಯನ್ನು ವಿವರಿಸುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ. (ಇದಕ್ಕೆ

ಸಂಬಂಧಿಸಿದಂತೆ ***ಹುಕ್ಕವ್ವ –ವಿರುದ್ಧ– ವಿಶ್ವನಾಥ್***[1] ಪ್ರಕರಣವನ್ನು ಗಮನಿಸಿ) ಕಾಲ ಬದಲಾಗಿದೆ. ಅಲ್ಲದೆ, ವೈವಾಹಿಕ ಸಂಸ್ಥೆಯ ಬಗೆಗಿನ ಸಮಾಜದ ಗ್ರಹಿಕೆಯು ಅದಲುಬದಲಾಗಿದೆ. ನಾವು ವಿಶ್ವಾತ್ಮಕ ಗ್ರಾಮ ಪರಿಕಲ್ಪನೆಯ ಶಕೆಯಲ್ಲಿನ 21ನೇ ಶತಮಾನದಲ್ಲಿ ಬದುಕುತ್ತಿದ್ದೇವೆ. ವ್ಯಕ್ತಿಗಳ ಹಕ್ಕುಗಳು ಮತ್ತು ಅವರ ಜೀವನದಲ್ಲಿನ ಖಾಸಗಿ ಬದುಕು ಅನಿಶ್ಚಯತೆಯಿಂದ ದೂರವಾಗಿರಬೇಕೆಂಬುದು ಇಂದಿನ ವಿಶ್ವದ ಜನರ ಬಯಕೆಯಾಗಿರುತ್ತದೆ. ಭಾರತ ಸಂವಿಧಾನದಡಿಯಲ್ಲಿ ನಿರೂಪಿತಗೊಂಡಿರುವ ವೈಯಕ್ತಿಕ ಹಕ್ಕುಗಳು ಹಲವಾರು ರೂಪಗಳಲ್ಲಿ ವಿಸ್ತರಿಸಿಕೊಳ್ಳುತ್ತಿವೆ. ಘನತೆಯಿಂದ ಬಾಳಲು 21ನೇ ಅನುಚ್ಛೇದವು ಅತ್ಯಾವಶ್ಯಕವಾಗಿರುತ್ತದೆ. ಇಲ್ಲಿ ಒಬ್ಬ ಮಹಿಳೆ ವಿವಾಹವೆಂಬ ಸಾಂಸ್ಥಿಕ ಬಂಧನದ ಸಂಕೋಲೆಗಳಿಂದ ಬಿಡುಗಡೆಯಾಗಬೇಕೆಂದು ಪರಿಹಾರವನ್ನು ಕೋರಿ ಕೌಟುಂಬಿಕ ನ್ಯಾಯಾಲಯ 2012ನೇ ವರ್ಷದಿಂದ ಈ ನ್ಯಾಯಾಲಯದ ಕದವನ್ನು ತಟ್ಟುತ್ತಿದ್ದಾಳೆ.

14. ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ಪ್ರತಿಯೊಬ್ಬ ಮನುಷ್ಯನೂ, ಜೀವನದಲ್ಲಿ ತಮ್ಮ ತಮ್ಮ ಖಾಸಗಿ ಬದುಕನ್ನು ಬದುಕಲು ಮತ್ತು ಸುಸ್ಥಾಪಿತ ರೀತಿ ರಿವಾಜುಗಳು ಹಾಗೂ ಚಾಲ್ತಿಯಲ್ಲಿರುವ ಕಾನೂನು ಕಟ್ಟಲೆಗಳ ಸರಹದ್ದನ್ನು ದಾಟದೆ ಒಳ್ಳೆಯ ರೀತಿಯಲ್ಲಿ ಬಾಳಲು ಹಕ್ಕುಳ್ಳವರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ, ವಿವಾಹದ ವಿಘಟನೆಯನ್ನು ನಿರಾಕರಿಸಿ ನೀಡಿರುವ ಕೌಟುಂಬಿಕ ನ್ಯಾಯಾಲಯ ನೀಡಿರುವ ತೀರ್ಪು ಮತ್ತು ಡಿಕ್ರಿಯು ತುಂಬಾ ಕಟುವಾಗಿದ್ದು, ಅದು ಆಧರಿಸಲು ದಾಖಲಿಸಿರುವ ಅಂಶಗಳು ಕಾನೂನಿನಲ್ಲಿ ಊರ್ಜಿತವಾಗುವುದಿಲ್ಲ. ಕಾಲ ಬದಲಾದಂತೆ, ನ್ಯಾಯಾಲಯಗಳು, ಸಮಾಜದಲ್ಲಿರುವ ಅಜ್ಞಾನಕ್ಕೆ ಜೋತು ಬೀಳದೆ, ಸಮಾಜವು ಬದಲಾಗುತ್ತಿರುವ ಕ್ರಮದಲ್ಲೇ ರೂಪಾಂತರಗೊಳ್ಳುತ್ತಿರಬೇಕಾಗುತ್ತದೆ.

15. ಈ ಪ್ರಕರಣದ ವಾಸ್ತವಾಂಶಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಅಪೀಲುದಾರರಿಗೆ ವಿವಾಹವೆಂಬ ಒಂದು ಸಾಂಸ್ಥಿಕ ಬಂಧನದಿಂದ ಮುಕ್ತಿ ಪಡೆಯುವುದು ಅವಶ್ಯಕವಾಗಿದೆಯೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ.

1. ಐಎಲ್ಆರ್ 2009 ಕೆಎಆರ್ 4193

16. ಪರಿಣಾಮವಾಗಿ, ನಾವು ಈ ಮುಂದಿನಂತೆ ಆಜ್ಞೆ ನೀಡಿರುತ್ತೇವೆ.

**ಆಜ್ಞೆ**

(i) ಅಪೀಲನ್ನು ಪುರಸ್ಕರಿಸಲಾಗಿರುತ್ತದೆ;

(ii) ಪ್ರಧಾನ ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಲಯ, ಬೆಂಗಳೂರು ಇವರ ಕಡತದ ಮೇಲಿನ ಎಂ.ಸಿ. ಸಂ.1384/2012ರಲ್ಲಿನ 15.1.2013ನೇ ದಿನಾಂಕದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಲಾಗಿದೆ ಮತ್ತು ತದನುಸಾರವಾಗಿ, ಸದರಿ ಅರ್ಜಿಯನ್ನು, ಬೆಂಗಳೂರಿನಲ್ಲಿ 10.3.2004ರಂದು ವಿಧಿವತ್ತಾಗಿ ಪ್ರತ್ಯರ್ಜಿದಾರರೊಂದಿಗೆ ನಡೆದ ಅಪೀಲುದಾರರ ವಿವಾಹವನ್ನು ರದ್ದುಪಡಿಸಿ ಅಂಗೀಕರಿಸಲಾಗಿರುತ್ತದೆ.